# ಕುವೆಂಪು ಕಂಡ ಮಹಾಮಾತೆ ಶ್ರೀಶಾರದೆ



ಚಿತ್ರಕೃಪೆ : ಶ್ರೀ ಕೃಪಾಕರ ಸೇನಾನಿ

ಶ್ರೀರಾಮಕೃಷ್ಣ-ವಿವೇಕಾನಂದ ಸಾಹಿತ್ಯವನ್ನು, ಅವರ ಜೀವನದ ಮಹಿಮೆಯನ್ನು ಕರ್ನಾಟಕದ ಜನತೆಗೆ ತಮ್ಮ ಬರಹಗಳ ಮೂಲಕ ಪರಿಚಯಿಸಿದ ರಾಷ್ಟ್ರಕವಿ ಕುವೆಂಪು ಅವರ ಜನ್ಮಶತಾಬ್ದಿಯನ್ನು ನಾಡಿನಾದ್ಯಂತ ಸರ್ಕಾರ ಸೇರಿದಂತೆ ಹಲವಾರು ಸಂಘಸಂಸ್ಥೆಗಳು ಆಚರಿಸುತ್ತಿವೆ. ಹೊಸ ಚಿಂತನೆಯ ಹರಿಕಾರರೆಂದೇ ಪರಿಗಣಿಸಲ್ಪಟ್ಟಿರುವ ಕುವೆಂಪು ಅವರ ಧೀರ ನಿಲುವಿನಲ್ಲಿ ಕನ್ನಡ ಸಾಹಿತ್ಯಪ್ರಪಂಚ ಒಂದು ಹೊಸ ದಿಗಂತವನ್ನೇ ಕಂಡುಕೊಂಡಿತು. ಕುವೆಂಪು ಅವರ ಜೀವನ ಕನ್ನಡದ ಜನತೆಗೆ ಸುಪರಿಚಿತವಾದರೂ, ಅವರ ಎಲ್ಲ ಚಿಂತನೆ-ಭಾವನೆಗಳಲ್ಲಿ ಹಾಸುಹೊಕ್ಕಾಗಿರುವ ವಿವೇಕಾನಂದರ, ಶ್ರೀರಾಮಕೃಷ್ಣರ ಸಮನ್ವಯ ದೃಷ್ಟಿ, ಅಪ್ರತಿಮ ಮಾನವೀಯತೆಗಳು ಎಲ್ಲರಿಗೂ ಗೋಚರವಾಗದೇ ಇರಬಹುದು. "ಸ್ವಾಮಿ ವಿವೇಕಾನಂದರ ವಾಣಿ ನನ್ನ ಜೀವಕ್ಕೆ ಅಭಯ ಘೋಷಣೆ ಮಾಡಿ, ತಾನು ಶಿವತತ್ತ್ವದಿಂದ ಅಭಿನ್ನನೆಂದೂ ಸಾರಿ, ಆತ್ಮದ ಔನ್ನತ್ಯ ನೈರ್ಮಲ್ಯ ಗೌರವಗಳನ್ನು ಮನಮುಟ್ಟುವಂತೆಯೂ ಎದೆವೊಗುವಂತೆಯೂ ಮಾಡಿತು" ಎಂದು ಅವರು (ನೆನಪಿನ ದೋಣಿಯಲ್ಲಿ) ಬರೆದಾಗ ಅದು ಅವರ ಅಂತರಾಳದ ಭಾವದ ಅಭಿವ್ಯಕ್ತಿಯೆಂದು ತಿಳಿಯಲು ಸಾಧ್ಯವಾಗುತ್ತದೆ. ಒಂದೊಮ್ಮೆ ಸ್ವಾಮೀಜಿಯ ಅಭಯವಾಣಿ ಅವರಿಗೆ ದೊರೆಯದೇ ಹೋಗಿದ್ದರೆ ಏನಾಗುತ್ತಿತ್ತು, ಏನಾಗಬಹುದಿತ್ತು ಎಂದು ಊಹಿಸುವುದೂ ಅಸಾಧ್ಯ. ಹೊಸ ವಿಚಾರಗಳನ್ನು ಆಂಗ್ಲ ಭಾಷೆಯ ಮೂಲಕ ಸ್ವೀಕರಿಸಿ, ತಮ್ಮದಾಗಿಸಿಕೊಂಡ ಕುವೆಂಪು ಅವರಿಗೆ ಸ್ವಾಮೀಜಿಯ ಭಾವನೆಗಳು ಆಕರ್ಷಕವಾಗಿ ಕಂಡದ್ದು ಮಾತ್ರವಲ್ಲದೆ ಅವರ ನಿರ್ಮಲ ಪ್ರಜ್ಞೆಗೆ ಪುಷ್ಟಿಯನ್ನು ನೀಡಿ ಸಂತೈದವು.

ದಿವ್ಯತ್ರಯರ ಕೃಪೆ ಅವರಲ್ಲಿ ಎಂತಹ ಅಚ್ಚಳಿಯದ ಪ್ರಭಾವ ಬೀರಿತು ಎಂಬುದನ್ನು ಗುರುತಿಸಲು ಈ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದೇವೆ. ತಮ್ಮದೇ ಆದ ಶೈಲಿಯಲ್ಲಿ ಕುವೆಂಪು ಅವರು ದಿವ್ಯತ್ರಯರ ಜೀವನ ಸಂದೇಶಗಳನ್ನು ಹಾಡಿ ಹೊಗಳಿದ್ದಾರೆ. ಜನಸಾಮಾನ್ಯರಿಗೆ ಈ ನವಯುಗಧರ್ಮ ತಲುಪಬೇಕೆಂದು ಸ್ವಾಮಿ ವಿವೇಕಾನಂದರ ಹಾಗೂ ಶ್ರೀರಾಮಕೃಷ್ಣರ ಜೀವನಕಥೆಯನ್ನು ಪರಿಚಯಿಸಿದರು. ಕುವೆಂಪುರವರು ಅತ್ಯಂತ ಸ್ಫೂರ್ತಿದಾಯಕವಾದ ಭಾಷೆ ಹಾಗೂ ಶೈಲಿಯಲ್ಲಿ ಬರೆದಿರುವ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯಂತೆ ಇತರ ಭಾರತೀಯ ಭಾಷೆಗಳಲ್ಲಿ ಸ್ವಾಮೀಜಿಯ ಜೀವನ ಪ್ರಕಟಗೊಂಡಿರುವುದು ಸಂದೇಹಾಸ್ಪದ. ಈ ಪುಸ್ತಕದಿಂದ ಪ್ರೇರಿತರಾಗಿರುವ ಅನೇಕ ಯುವಕರು ಯುವತಿಯರು ಸ್ವಾಮೀಜಿಯ ಭಾವನೆಗಳಿಗೆ ಸ್ಪಂದಿಸಿ ತ್ಯಾಗಜೀವನವನ್ನು ಸ್ವೀಕರಿಸಿರುವುದನ್ನು ನೋಡಿದರೆ ಈ ಪುಸ್ತಕದ ಮಹತ್ವ ನಮ್ಮ ಅರಿವಿಗೆ ಬಾರದೆ ಇರದು. ಸ್ವಾಮೀಜಿಯ ಭಾವನೆಗಳನ್ನು ಅತ್ಯಂತ ಮಾರ್ಮಿಕವಾಗಿ ಪ್ರತಿಬಿಂಬಿಸುವ ಕುವೆಂಪು ಅವರ ಈ ಕೃತಿಯಂತೆ ಮತ್ತೊಂದು ಕನ್ನಡದಲ್ಲಿಯೂ ಬರಲಿಲ್ಲವೆಂದೇ ಹೇಳಬಹುದು.

ಸ್ವಾಮೀಜಿಯಿಂದ ಪ್ರಭಾವಿತರಾಗಿ ಅವರ ಜೀವನವನ್ನು ತಮ್ಮ ಹರೆಯದಲ್ಲಿಯೇ ಬರೆದದ್ದು ಧನ್ಯತಾ ಭಾವದಿಂದಲೇ ಹೊರತು ತಮ್ಮ ಆರಾಧ್ಯದೈವವನ್ನು ಲೋಕಪ್ರಿಯನನ್ನಾಗಿಸಬೇಕೆಂಬ ಸಂಕುಚಿತ ಮನೋಭಾವ ಅವರಲ್ಲಿರಲಿಲ್ಲ. ಜಾತಿ, ಮತ, ಕುಲ, ದೇಶಗಳಿಗೆ ಅತೀತವಾದ ಈ ಭಾವನೆಗಳೇ ಭಾರತದ ಭವಿಷ್ಯತ್ತು ಎಂದು ಕುವೆಂಪು ಸ್ಪಷ್ಟವಾಗಿ ಕಂಡಿದ್ದರು. ಕುವೆಂಪು ಅವರ ಸಂಪರ್ಕವನ್ನು ಹೊಂದಿದ್ದ ಹಲವು ಗಣ್ಯರ ಲೇಖನಗಳನ್ನು ಈ ವಿಶೇಷ ಸಂಚಿಕೆ ನಿಮಗೆ ನೀಡುತ್ತಿದೆ. ಇದು ಕುವೆಂಪು ಅವರ ರಸದೃಷ್ಟಿಗೆ, ಕಾವ್ಯಗಂಗೆಗೆ, ಋಷಿವಾಣಿಗೆ ಅವರ ಜನ್ಮಶತಾಬ್ದಿಯಂದು ರಾಮಕೃಷ್ಣ ಮಹಾಸಂಘವು ಅರ್ಪಿಸುತ್ತಿರುವ ಶ್ರದ್ಧಾಂಜಲಿ.

**ಪ್ರಾಯೋಜಕರು** : ಎಸ್. ಪಿ. ಆರ್. ಎಕ್ಸ್‌ಪ್ರೆಸ್, ನಂ.2, 3ನೇ ಕ್ರಾಸ್,
ಪಿ.ಬಿ. ನಂ.6970, ಹೊಸ ಬಡಾವಣೆ, ಬೆಂಗಳೂರು -560 002

ಶ್ರೀಮಾತೆ ಶಾರದಾದೇವಿಯ ವಿಸ್ತಾರವಾದ ಜೀವನವನ್ನು ಬರೆಯದಿದ್ದರೂ ಕುವೆಂಪು ತಮ್ಮ **ಶ್ರೀರಾಮಕೃಷ್ಣ ಪರಮಹಂಸ** ಗ್ರಂಥದ 'ಕಾಮಿನಿ' ಮತ್ತು 'ಶ್ರೀಮಾತೆ' ಅಧ್ಯಾಯಗಳಲ್ಲಿ ಅವರ ಪರಿಚಯವನ್ನು ಅತ್ಯಂತ ಶ್ರದ್ಧೆಯಿಂದ ಮಾಡಿಕೊಟ್ಟಿದ್ದಾರೆ. 'ಶ್ರೀಶಾರದಾದೇವಿ ಹೇ ಮಹಾಮಾತೆ' ಎಂಬ ಕವನದಲ್ಲೂ ಭಕ್ತಿಯ ನಮನವನ್ನು ಅರ್ಪಿಸುತ್ತ "ನೀನೆ ಕಾಳಿ, ಲಕ್ಷ್ಮೀ, ಬಿಜ್ಜೆ"ಯೆಂದು ಸ್ತುತಿಸಿದ್ದಾರೆ. ಶ್ರೀಮಾತೆಯ ಜೀವನದಲ್ಲಿ ಕುವೆಂಪು ಗುರುತಿಸಿದಂತಹ ಮಹಿಮೆಯೇನು ಎಂಬುದು ಈ ಲೇಖನದ ಮೂಲವಸ್ತು. ಸ್ವಾರಸ್ಯವೆಂದರೆ ಇದೀಗ ೨೦೦೪ರಲ್ಲಿ ಶ್ರೀಶಾರದಾದೇವಿಯವರ ೧೫೦ನೆಯ ಜನ್ಮದಿವಸದ ಆಚರಣೆಯಾಗಿದೆ. ತಮ್ಮ 'ನೆನಪಿನ ದೋಣಿಯಲ್ಲಿ' ಕುವೆಂಪು ಬಹಳ ಅಭಿಮಾನದಿಂದ ಹೇಳಿಕೊಂಡಿದ್ದಾರೆ, "ಶ್ರೀಮಹಾಮಾತೆ ಶಾರದಾದೇವಿಯರ ಜನ್ಮತಿಥಿಯೂ ನನ್ನ ಜನ್ಮತಿಥಿಯೂ ಒಂದೇ ಆಗಿರುವುದು ನನಗೆ ಆನಂದದ ಮತ್ತು ಹೆಮ್ಮೆಯ ವಿಷಯವಾಗಿದೆ." ಇಬ್ಬರೂ ಜನಿಸಿದ್ದು ಡಿಸೆಂಬರ್ ತಿಂಗಳ ಕೃಷ್ಣಸಪ್ತಮಿಯಂದು, ಗುರುವಾರ.

### ಕವಿದೃಷ್ಟಿ:

ಕವಿ ಕ್ರಾಂತದರ್ಶಿ. ಸಾಮಾನ್ಯ ದೃಷ್ಟಿಗೆ ಗೋಚರವಾಗದ ಸೂಕ್ಷ್ಮ ಸಂವೇದನೆಗಳನ್ನು ಗ್ರಹಿಸುವ ಶಕ್ತಿ ಕವಿಗಿರಬೇಕು. ಮೂಲಪ್ರಕೃತಿಯೇ ಈ ಜಗತ್ತಿನ ಸೃಷ್ಟಿಕರ್ತೆ. ಈ ವೈವಿಧ್ಯಮಯ ವಿಶ್ವವೆಲ್ಲ ಅವಳ ಲೀಲೆ. ಕವಿ ಕೇವಲ ಪ್ರಕೃತಿಯ ಆರಾಧಕನಾಗಿ ಉಳಿಯದೆ ಅದರ ಸೊಬಗಲ್ಲಿ ಮಿಂದು, ಕರಗಿ, ತನ್ನನ್ನು ಮರೆತು, ಅದರ ಹಿಂದಿರುವ ಪರಮಸತ್ಯವನ್ನು ಮುಟ್ಟುತ್ತಾನೆ. ಆಗ ಮಾತ್ರ ನಿಜವಾದ ಕಾವ್ಯ ಸಾಧ್ಯ. ಇಂತಹ ಒಂದು ಅನುಭೂತಿಯನ್ನು ೧೯೨೬ನೆಯ ಮಾರ್ಚಿ ೯ನೆಯ ಮಂಗಳವಾರದ ದಿನಚರಿಯಲ್ಲಿ ಕುವೆಂಪು ಬರೆದಿದ್ದಾರೆ, "ಸಂಜೆ ನಾನೂ, ಟಿ.ವಿ.ಎ. ಸಂಚಾರ ಹೋಗಿದ್ದೆವು. (ಅಂದಿನ) ಸೂರ್ಯಾಸ್ತವು ನನ್ನ ಜೀವನದ ಒಂದು ಚಿರಸ್ಮರಣೀಯವಾದ ಸಂಗತಿಯಾಗಿತ್ತು. ಸಚ್ಚಿದಾನಂದದ ಸತ್ಯದರ್ಶನವಾಯಿತೆನಗೆ. ಮೈಮರೆತು ಬಿಟ್ಟೆ. ಪರಾತ್ಪರ ಚಿತ್‌ಸಾನ್ನಿಧ್ಯವನ್ನು ಅನುಭವಿಸಿದೆ... ನಾನು ಧನ್ಯನಾದೆ. ಪ್ರಾಚೀನ ಕಾಲದಲ್ಲಿ ಮತ್ತು ಇಂದೂ ಋಷಿಗಳು ಏನನ್ನು ದರ್ಶಿಸಿದ್ದರೋ ಅದನ್ನು ಕಂಡಿದ್ದೇನೆ ನಾನು" (ನೆನಪಿನ ದೋಣಿಯಲ್ಲಿ,ಪುಟ ೫೫೦). ಈ ಋಷಿದೃಷ್ಟಿಯಿಂದ ಶ್ರೀಮಾತೆಯ ಜೀವನವನ್ನು ಅವಲೋಕಿಸಿ, ಅಸಾಮಾನ್ಯತೆಯನ್ನು ಗುರುತಿಸಿ ಮಹಾಮಾತೆಯೆಂದೇ ನಮಿಸಿದರು. ಅವರು ಕಂಡ ಮಹಿಮೆಯ ಲಕ್ಷಣಗಳನ್ನು ಕವಿದೃಷ್ಟಿಯಲ್ಲೇ ಕಾಣುವ ಪ್ರಯತ್ನ ಮಾಡೋಣ.

> ವಿಶೇಷತೆ ಶ್ರೀರಾಮಕೃಷ್ಣರ ಜೀವನದಲ್ಲಿ ಮಾತ್ರವಲ್ಲದೆ ಶಾರದಾಮಣಿದೇವಿಯ ಜೀವನದಲ್ಲಿಯೂ ಕಂಡುಬರುತ್ತದೆ. ಅರಿಯದ ಹುಡುಗಿ ಪತಿಯ ಮಹಾಜೀವನಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿದ್ದು ಸಾಮಾನ್ಯ ಘಟನೆಯಲ್ಲ. ಶ್ರೀಮಾತೆಯ ಜೀವನಯಾತ್ರೆ ರೋಚಕವಾದ ಮಹಾಘಟನೆಗಳಿಂದ ಕೂಡಿರದಿದ್ದರೂ ಭಗಿನೀ ನಿವೇದಿತೆಯ ಮಾತಿನಂತೆ "ಆಕೆಯ ಜೀವನವೆಲ್ಲ ಒಂದು ಮಹಾ ನೀರವ ಧ್ಯಾನವಾಗಿದೆ." – ಕುವೆಂಪು

### ಆದರ್ಶ ತಪಸ್ವಿನಿ

ಆಡಂಬರವಿಲ್ಲದ, ಜೀವನದ ಪ್ರತಿಕ್ಷಣವನ್ನೂ ಸಾಧನೆಯಾಗಿ ಪರಿವರ್ತಿಸಿಕೊಂಡ ಶ್ರೀಮಾತೆಯ ಬಾಳನ್ನು ಸರಸ್ವತೀ ನದಿಯೊಂದಿಗೆ ಹೋಲಿಸುತ್ತ ಕುವೆಂಪು ಬರೆಯುತ್ತಾರೆ. "ಶ್ರೀರಾಮಕೃಷ್ಣ ಮತ್ತು ವಿವೇಕಾನಂದರು ಗಂಗಾ ಯಮುನಾ ನದಿಗಳಂತೆ ಬಹಿರಂಗವಾಗಿ ಹರಿಯುತ್ತಾ ಜಗಚ್ಚಕ್ಷುಗಳನ್ನು ಆಕರ್ಷಿಸುತ್ತಿದ್ದರೆ ಲಜ್ಜಾಪಟಾವೃತಳಾದ ಶ್ರೀಮಾತೆ ಶಾರದಾದೇವಿ ಗುಪ್ತಗಾಮಿನಿಯಾದ ಸರಸ್ವತೀ ನದಿಯಂತೆ ಹರಿದು ಶ್ರೀಗುರುದೇವ ಮತ್ತು ಸ್ವಾಮೀಜಿಯವರ ಜೀವನಲೀಲೆಗೆ ತನ್ನ ಗುಹ್ಯಜೀವನವನ್ನು ಸಮರ್ಪಿಸಿ ಒಂದು ದಿವ್ಯತರವಾದ ತ್ರಿವೇಣೀ ಸಂಗಮವನ್ನು ನಿರ್ಮಿಸಿದ್ದಾರೆ." (ಶ್ರೀರಾಮಕೃಷ್ಣ ಪರಮಹಂಸ, ಪು. ೧೪೫). ಸಾಮಾನ್ಯ ದೃಷ್ಟಿಗೆ ನಿಲುಕದ ಇವರ ಸಾಧನೆಯ ವಿಶೇಷತೆಯನ್ನು ಗುರುತಿಸಲು ಅಂತರ್ ದೃಷ್ಟಿ ಬೇಕು. ಇವರ ಜೀವನವು ಒಂದು ಆಧ್ಯಾತ್ಮಿಕ ತರಂಗಿಣಿಯೆಂದೇ ಕರೆಯುತ್ತಾರೆ ಕುವೆಂಪು. "ಜಗತ್ತು ಪರಮಹಂಸರ ಆತ್ಮಜ್ಯೋತಿಯ ಮಹೋಜ್ವಲಮಂಡಲವನ್ನು ದರ್ಶಿಸುವ ಸಂಭ್ರಮದಲ್ಲಿ ಆ ಪುಣ್ಯವನಿತೆಯ ನೀರವ ಧ್ಯಾನಜೀವನದ ನಮ್ರದೀಪ್ತಿಯನ್ನು ಅಲ್ಪಜ್ಞಾನದಿಂದಾಗಲಿ ನಿರ್ಲಕ್ಷ್ಯತೆಯಿಂದಾಗಲಿ ಅನಾದರದಿಂದ ಕಾಣದಂತೆ ಮಾಡುವುದು ಪ್ರತಿಯೊಬ್ಬ ಜೀವನಚರಿತ್ರಕಾರನ ಕರ್ತವ್ಯವಾಗಿದೆ. ಪರಮಹಂಸ ಗುರುದೇವನ ಸ್ತ್ರೀಭಕ್ತರಲ್ಲಿ ಸರ್ವಶ್ರೇಷ್ಠವೂ ಪ್ರಥಮ ಪ್ರಧಾನವೂ ಸುಪ್ರಸಿದ್ಧವೂ ಆದ ವ್ಯಕ್ತಿ ಎಂದರೆ ಅವರ ಸಹಧರ್ಮಿಣಿ ಶ್ರೀಶಾರದಾಮಣಿದೇವಿ"(ಅದೇ, ಪು.೧೩೬) ಎಂದು ಹೇಳುತ್ತ ಪುರಾಣಗಳ ಸೀತೆ, ಸಾವಿತ್ರಿಯರಿಗಿಂತ ವಿಶೇಷವಾದ ವ್ಯಕ್ತಿತ್ವವನ್ನು ಶ್ರೀಮಾತೆಯ ಅಂತರ್ಮುಖೀ ಜೀವನದಲ್ಲಿ ಕಾಣುತ್ತಾರೆ. ಪತಿಗೆ ಸಹಧರ್ಮಿಣಿಯಾಗಿದ್ದು, ಶ್ರದ್ಧೆಯಿಂದ ಸೇವೆಗೈಯುತ್ತ, ಪರಿಶುದ್ಧ ಜೀವನವನ್ನು ನಡೆಸಿದ್ದು ಮಾತ್ರವಲ್ಲದೆ ಪತಿಯ ಆಧ್ಯಾತ್ಮಿಕ ಮಟ್ಟಕ್ಕೆ ಏರಿ ಅವರನ್ನು ಎಲ್ಲ ಸ್ತರಗಳಲ್ಲೂ ತಿಳಿದವರು ಶ್ರೀಮಾತೆ. ಅದಕ್ಕಾಗಿಯೇ "ಮಹಿಮೆ ಮಹಿಮೆಯನರಿವುದೆಂದೆಂಬರಮ್ಮ, ಶ್ರೀಗುರುವರ್ಯನಂ ತಿಳಿದ ನೀ ಮಹಿಮಳಮ್ಮಾ" ಎಂದು ಬರೆಯುತ್ತಾರೆ ಕುವೆಂಪು.

ಮತ್ತೊಬ್ಬರನ್ನು ಗುರುತಿಸಲು, ಅವರ ಮಹಿಮೆಯನ್ನು ಅರಿಯಲು ನಮ್ಮಲ್ಲೂ ಮಹಿಮೆಯಿದ್ದರೆ, ಆ ಗುಣಗಳಿದ್ದರೆ ಮಾತ್ರ ಸಾಧ್ಯ. ಯುಗಪುರುಷನ ಆಧ್ಯಾತ್ಮಿಕ ಭಾವನೆಗಳಿಗೆ ಸ್ಪಂದಿಸಿ ಅವರ ನಂತರ ಶಿಷ್ಯವರ್ಗಕ್ಕೆ ಹಾಗೂ ಭಕ್ತರಿಗೆ ಶ್ರೀಮಾತೆಯಾದ ಶಾರದೆ ಆತ್ಮಪ್ರದೀಪವನ್ನು ಬೆಳಗಿಸುವ ಭವ್ಯಜ್ಯೋತಿಯಾದರು.

❑ **ಗುರುದೇವನ ಸಹಧರ್ಮಿಣಿಯಾದುದರಿಂದಲೂ ಕಠೋರ ತಪಸ್ವಿನಿಯಾದುದರಿಂದಲೂ ಆಕೆಯಲ್ಲಿ ಜನರಿಗೆ ಮಹಾ ಗೌರವವಿರುತ್ತಿತ್ತು. ಆದರೂ ಉದಾತ್ತರಾದ ಶಾರದಾದೇವಿ ಇತರ ಸಾಮಾನ್ಯ ಸ್ತ್ರೀಯರಂತೆ ದೀನಭಾವದಿಂದ ವರ್ತಿಸುತ್ತಿದ್ದರೆ ಹೊರತು ಔದ್ಧತ್ಯಕ್ಕೆ ಒಂದಿನಿತಾದರೂ ಅವಕಾಶ ಕೊಡುತ್ತಿರಲಿಲ್ಲ. ಆಕೆ ಯಾವಾಗಲೂ ತಾಯಿಯಾಗಿರುತ್ತಿದ್ದರೆ ಹೊರತು ರಮಣಿಯಂತಿರುತ್ತಿರಲಿಲ್ಲ. – ಕುವೆಂಪು** ❑

ಶ್ರೀಮಾತೆಯ ನಿತ್ಯಜೀವನವೇ ತಪಸ್ಸಾಗಿ ಪರಿವರ್ತಿಸಿತ್ತು. ಪತಿಸೇವೆ ಹಾಗೂ ಅವರ ಶಿಷ್ಯವೃಂದದ ಸೇವೆಯೇ ಅವರ ಸಾಧನೆ, ತಪಸ್ಸು. ಇದನ್ನು ಕುವೆಂಪು ಗುರುತಿಸಿದರು. "ಆಕೆ ಹಗಲಿರುಳೆನ್ನದೆ ಹೊತ್ತುಗೊತ್ತೆನ್ನದೆ ಒಂದಿನಿತೂ ಬೇಸರಪಡದೆ ಗೊಣಗುಟ್ಟದೆ, ಭಕ್ತರ ಸೇವೆಯೆ ಸಾಧಕನ ತಪಸ್ಸೆಂದು ಭಾವಿಸಿ, ಮುದದಿಂದ ಕೆಲಸ ಮಾಡುತ್ತಿದ್ದರು. ಬಡತನದಲ್ಲಿ ಕಷ್ಟಜೀವನ ಮಾಡುತ್ತಿದ್ದರೂ ಆಕೆಯಲ್ಲಿ ಧನಲೋಭವಾಗಲಿ, ಭೋಗಾಭಿಲಾಷೆಯಾಗಲಿ, ಕೆಲಸ ಮಾಡಲು ಕಿಂಕರರು ಬೇಕೆಂಬ ಆಸೆಯಾಗಲಿ ಎಳ್ಳನಿತೂ ಇರಲಿಲ್ಲ. ಪರಮಹಂಸರಲ್ಲಿದ್ದ ನಿರ್ಲೋಭತೆ ಆಕೆಯಲ್ಲಿಯೂ ಎದೆಯೊಳಗೆ ಬೇರೂರಿತ್ತು" (ಅದೇ, ಪು. ೧೪೨-೩).

ವಿಶ್ವಮಾತೆ ಶ್ರೀಮಾತೆ:

ತಾಯಿಯೆಂದೊಡನೆ ವಾತ್ಸಲ್ಯದ, ಸಹನೆಯ ಭಾವನೆಗಳು ನಮ್ಮಲ್ಲಿ ಜಾಗೃತವಾಗಿ ಎಲ್ಲೋ ಅಂತರಾಳದಲ್ಲಿ ಸುಖ, ನೆಮ್ಮದಿಯ ತರಂಗಗಳು ಉತ್ಪತ್ತಿಯಾಗುತ್ತವೆ. ಈ ಎರಡು ಅಕ್ಷರಗಳಲ್ಲಿ ಅದೆಂತಹ ಅದ್ಭುತ ಶಕ್ತಿ ಅಡಗಿದೆ! ಸೃಷ್ಟಿಯ ಕ್ರಮದಲ್ಲಿ ಪ್ರಕೃತಿ ತಾಯಿಗೆ ಮಕ್ಕಳ ಪಾಲನೆ ಪೋಷಣೆಯ ಹೊಣೆಯನ್ನು ನೀಡಿದ್ದು ಅದು ಸ್ವಾಭಾವಿಕ ಕ್ರಿಯೆಯಾಗಿದೆ. ತಾಯಿಯಾದವಳು ತನ್ನ ಸಂತಾನವನ್ನು ಪ್ರೀತಿಸುವ ಸಾಮಾನ್ಯ ಕ್ರಿಯೆಯಲ್ಲಿ ಪ್ರಕೃತಿಯ ಪ್ರಚೋದನೆಯೇ ಹೆಚ್ಚು. ಎಲ್ಲ ಪ್ರಾಣಿ ಸಂಕುಲಗಳೂ ಸಂತಾನೋತ್ಪತ್ತಿ, ತಮ್ಮ ವಂಶದ ವೃದ್ಧಿ ಹಾಗೂ ಪಾಲನೆಯಲ್ಲಿ ನೈಸರ್ಗಿಕ ನಿಯಮಕ್ಕನುಸಾರವಾಗಿ ನಡೆದುಕೊಳ್ಳುತ್ತವೆ. ತಾಯಿಹಕ್ಕಿ ಅಥವಾ ಪ್ರಾಣಿ ತನ್ನ ಸಂತಾನವನ್ನು ವಿಪತ್ತಿನಿಂದ ರಕ್ಷಿಸಲು ಹಲವಾರು ಜೀವಾಂತಕ ಸನ್ನಿವೇಶಗಳನ್ನೇ ಎದುರಿಸುತ್ತದೆ. ತನ್ನ ದೇಹವನ್ನೇ ಮರಿಗಳಿಗೆ ಆಹಾರವಾಗಿ ಅರ್ಪಿಸಿಕೊಳ್ಳುವ ಜೇಡ ಹಾಗೂ ಇತರ ಪ್ರಾಣಿಗಳನ್ನು ಜೀವಶಾಸ್ತ್ರ ಅಧ್ಯಯನ ಮಾಡಿದೆ. ಆದರೆ ಈ ಎಲ್ಲ ಕ್ರಿಯೆಗಳಲ್ಲೂ, ತ್ಯಾಗದಲ್ಲೂ, ಅದರ ತನ್ನತನದ ಪ್ರಕಾಶಕ್ಕಿಂತ ಸ್ವಾಭಾವಿಕ ಆನುವಂಶಿಕ ನಡತೆಯನ್ನೇ ನಾವು ಕಾಣುವುದು. ಈ ಕ್ರಿಯೆಗಳ ಹಿನ್ನೆಯಲ್ಲಿ ತ್ಯಾಗ, ಪ್ರೀತಿ ಇತ್ಯಾದಿ ಭಾವನೆಗಳಿಲ್ಲ. ಪ್ರಕೃತಿಯ ಪ್ರಚೋದನೆ ಹಾಗೂ ವಂಶಾನುಗತವಾಗಿ ಬಂದಿರುವ ದೇಹಸಂಬಂಧವಾದ ಗುಣಗಳೇ ಇಲ್ಲಿ ಕೆಲಸಮಾಡುತ್ತಿವೆ. ಆ ತಾಯಿಜೀವಿಗೆ ಬೇರೆ ರೀತಿಯಲ್ಲಿ ವರ್ತಿಸುವ ಸ್ವಾತಂತ್ರ್ಯವೂ ಇಲ್ಲ! ಪ್ರಕೃತಿಯ ಕೈಯಲ್ಲಿ ಅದು ಸೆರೆಯಾಳು. ಸೃಷ್ಟಿಯನ್ನು ಮುಂದಕ್ಕೆ ಕರೆದುಕೊಂಡು ಹೋಗುವ ಸ್ಥಿತಿಯ ಕ್ರಿಯೆಯಲ್ಲಿ ಅದೊಂದು ಉಪಕರಣವಷ್ಟೇ.

ಮಾನವನೂ ಕೂಡ ಈ ಪ್ರಕೃತಿಯ ರಚನೆಯಲ್ಲಿ ಒಂದು ಪ್ರಾಣಿಸದೃಶ ಭಾಗವಾದರೂ ಈ ನೈಸರ್ಗಿಕ ಬಂಧನಗಳನ್ನು ಮೀರಿನಿಲ್ಲುವ ಸಾಮರ್ಥ್ಯ ಅವನಿಗಿದೆ. ಪ್ರಕೃತಿಯ ನಿಯಮಗಳನ್ನು ಅತಿಕ್ರಮಿಸುವುದೇ ಮುಕ್ತಿ. "ನಮಗೆ ಬೇಕಾಗಿರುವುದು ನಿಯಮವಲ್ಲ. ನಿಯಮವನ್ನು ಅತಿಕ್ರಮಿಸಬೇಕು ನಾವು. ನಾವು ನಿಯಮಾತೀತರಾಗಬೇಕು. ನೀನು ನಿಯಮಕ್ಕೆ ಬಾಗಿದರೆ ಒಂದು ಮಣ್ಣುಮುದ್ದೆಯಾಗುವೆ.... ಪ್ರಕೃತಿಯೆಲ್ಲ ನಿಯಮಕ್ಕೆ ಅಧೀನ. ನೀವು ಪ್ರಕೃತಿಯ ಒಂದು ನಿಯಮವನ್ನು ಛೇದಿಸಲು ಸಾಧ್ಯವಾದರೆ, ಸೃಷ್ಟಿಯೆಲ್ಲ ತಕ್ಷಣ ಕೊನೆಗಾಣುವುದು. ಯಾರು ಮುಕ್ತರಾಗುವರೋ ಅವರು ನಿಯಮವನ್ನು ಛೇದಿಸುವರು. ಪ್ರಕೃತಿ ಅವರಿಗೆ ಮಾಯವಾಗುವುದು. ಅವರ ಮೇಲೆ ಇದಕ್ಕೆ ಇನ್ನು ಯಾವ ಪ್ರಭಾವವೂ ಇರಲಾರದು" (**ಸ್ವಾಮಿ ವಿವೇಕಾನಂದರ ಬೋಧನೆಯ ಸಾರ**, ಪು. ೬೩).

ಇದನ್ನು ಕುರಿತು ಆಲೋಚಿಸಿದರೆ ಪ್ರಾಣಿಹಂತದಿಂದ ಮೇಲೇರಲು ಪ್ರಕೃತಿಯನ್ನು ಮೀರಿ ನಿಲ್ಲಬೇಕು ಎಂದು ತಿಳಿದು ಬರುತ್ತದೆ. ಮಹಿಳೆಯೂ ಕೂಡ ಕೇವಲ ದೈಹಿಕವಾಗಿ ತಾಯಿಯಾಗುವುದಕ್ಕಿಂತ ನೈತಿಕ ಹಾಗೂ ಆಧ್ಯಾತ್ಮಿಕವಾಗಿಯೂ ತಾಯಿಯಾದಲ್ಲಿ ತಾನೂ ಮುಕ್ತಳಾಗುತ್ತಾಳೆ. ತನ್ನ ಮಕ್ಕಳನ್ನೂ ಬಂಧನದಿಂದ ಬಿಡಿಸುವ ಸಾಧನವಾಗುತ್ತಾಳೆ. ಮಕ್ಕಳನ್ನು ಹೆತ್ತು ಪೋಷಿಸುವ ಸಾಮಾನ್ಯ ಕ್ರಿಯೆಯೊಂದಿಗೆ ಆ ಮಕ್ಕಳಲ್ಲಿ ಉನ್ನತ ಮೌಲ್ಯಗಳನ್ನು ರೂಢಿಸಿ ಅವರು ಉತ್ತಮ ವ್ಯಕ್ತಿಗಳಾಗುವಂತೆ ರೂಪಿಸುವಲ್ಲಿ ತಾಯ್ತನದ ಪೂರ್ಣತ್ವವಿದೆ. ಪ್ರಕೃತಿಯ ಬಂಧನದಿಂದ ಮುಕ್ತವಾಗುವಂತಹ ವಿದ್ಯೆಯನ್ನು, ಸಂಸ್ಕಾರವನ್ನು ನೀಡಬಲ್ಲ ತಾಯಿ ಅಸಾಮಾನ್ಯಳು. ತನ್ನ ಮಕ್ಕಳೆಂಬ ಸ್ವಾರ್ಥವನ್ನು ಮೀರಿ ಎಲ್ಲರಿಗೂ ತಾಯಿಯಾಗಿ ಸಮನಾದ ಪ್ರೀತಿ, ವಾತ್ಸಲ್ಯಗಳನ್ನು ಅಭಿವ್ಯಕ್ತಗೊಳಿಸಿ, ಜಾತಿ, ಮತ, ಪಂಡಿತ, ಪಾಮರ, ಧನಿಕ, ನಿರ್ಗತಿಕ ಎಂಬ ಭೇದವೆಣಿಸದೆ ಇರುವುದು ತಾಯ್ತನದ ಪೂರ್ಣತ್ವಕ್ಕಿಂತ ಮಿಗಿಲಾದ ವಿಶ್ವ ಮಾತೃತ್ವ. "ಆಕೆಯ ವಿಶಾಲ ಹೃದಯಕ್ಕೆ ರಾಷ್ಟ್ರ, ದೇಶ, ಜನಾಂಗ, ಮತ, ಭಾಷೆ

ಯಾವ ಭೇದವೂ ಇರಲಿಲ್ಲ. ಸರ್ವರಿಗೂ ಆಕೆ ಜನನಿಯಾಗಿದ್ದರು.... ಶ್ರೀಮಾತೆ ಪ್ರಾಚೀನ ಸಂಪ್ರದಾಯದ ಬ್ರಾಹ್ಮಣರ ಕುಲದಲ್ಲಿ ಜನಿಸಿದವರು. ಶಾಲೆಗಳಲ್ಲಿ ಓದಲಿಲ್ಲ. ಆದರೂ ಆಕೆಯಲ್ಲಿ ಎಂತಹ ಸುಧಾರಕ ಚಿತ್ತವಿತ್ತು!" (ಅದೇ, ಪು. ೧೪೪) ಎನ್ನುತ್ತಾರೆ ಕುವೆಂಪು.

ತಿಳಿಸುತ್ತಿದ್ದರು. ಅವರಿಗೆ ಸಾಮಾನ್ಯತೆಯಲ್ಲೂ, ಅತಿ ಸಣ್ಣದರಲ್ಲೂ ಮಹತ್ತನ್ನೇ ಕಾಣುವ ವಿಶೇಷ ದೃಷ್ಟಿಯಿತ್ತು. ಆದ್ದರಿಂದಲೇ ಸಾಮಾನ್ಯರಿಗೆ ಗೋಚರಿಸುವ ತಪ್ಪುಗಳು ಅವರಿಗೆ ತಪ್ಪಾಗಿ ಕಾಣುತ್ತಿರಲಿಲ್ಲ. ಇಂತಹ ತಾಯಿಯನ್ನು, ಮಹಾಮಾತೆಯನ್ನು ತಿಳಿಯುವುದು ಮಾನವಮಾತ್ರನಿಂದ

◆ ಶ್ರೀಮಾತೆಯಲ್ಲಿ ಪತಿತಪಾವನೆಯ ಗುಣ ಸಂಪೂರ್ಣವಾಗಿ ವ್ಯಕ್ತವಾಗಿತ್ತು. ಲೋಕದಲ್ಲಿ ಕರ್ಮವಿಪಾಕದಿಂದಲೊ ವಿಧಿವಶದಿಂದಲೊ ಸ್ತ್ರೀಯ ಹೃದಯದೌರ್ಬಲ್ಯದಿಂದಲೊ ಅಥವಾ ಸನ್ನಿವೇಶ ಸಹವಾಸ ದೋಷಗಳಿಂದಲೊ ಪ್ರಲೋಭನೆಗಳಿಗೆ ಶರಣಾಗಿ ದಾರಿ ತಪ್ಪಿದವರನ್ನು " ಎಲೈ ಪಾಪಿಗಳೆ " ಎಂದು ಸಂಬೋಧಿಸಿ, ನರಕಭಯವನ್ನು ತೋರಿ, ಪುಕ್ಕಟೆಯಾಗಿ ಬುದ್ಧಿ ಹೇಳಿ ಉಪದೇಶ ಮಾಡುವ ಮೂರ್ಖಾಚಾರ್ಯರು ಎಷ್ಟೋ ಮಂದಿ ಇದ್ದಾರೆ. ಆದರೆ ಪಾಪಿಗಳನ್ನು ಆಲಂಗಿಸಿ, ಧೈರ್ಯ ಹೇಳಿ, ಸಹಾನುಭೂತಿ ತೋರಿಸಿ ಅವರನ್ನು ಉದ್ಧಾರ ಮಾಡುವವರು ಎಲ್ಲಿಯೋ ಬಹು ಸ್ವಲ್ಪ ಪುಣ್ಯಾತ್ಮರು. ಅಂತಹವರೆ ಪತಿತಪಾವನರು. — ಕುವೆಂಪು ◆

ಅಸಾಮಾನ್ಯ ಸಾಮಾನ್ಯೆ:

ಶ್ರೀಮಾತೆಯ ಸಾಮಾನ್ಯತೆಯನ್ನು ಭೇದಿಸಿ ಲೋಕಮಾತೆಯನ್ನು ಕಾಣುವ ದೃಷ್ಟಿ ಎಲ್ಲರಿಗೂ ಲಭ್ಯವಿಲ್ಲ. ಶ್ರೀರಾಮಕೃಷ್ಣರೇ ಸ್ವತಃ ಅವರ ಬಗ್ಗೆ ಹೇಳಿದ್ದರು : " ಅವಳು ಶಾರದೆ, ಸರಸ್ವತಿ. ಜ್ಞಾನವನ್ನು ನೀಡಲು ಬಂದಿದ್ದಾಳೆ. ಈ ಬಾರಿ ತನ್ನ ಸೌಂದರ್ಯವನ್ನು ಮರೆಮಾಡಿಕೊಂಡು ಬಂದಿದ್ದಾಳೆ... ಅಸಾಮಾನ್ಯವಾದ ಜ್ಞಾನದಿಂದ ಪೂರ್ಣಳು. ಅವಳೇನು ಸಾಮಾನ್ಯಳೇ ? ಅವಳು ನನ್ನ ಶಕ್ತಿ"(*Sri Sarada Devi, the Great Wonder*, ಮುಖಪುಟ). ಶ್ರೀಮಾತೆಯಾದರೋ ಇದಾವುದನ್ನೂ ತೋರ್ಗೊಡದೆ ಸಾಮಾನ್ಯತೆಯನ್ನೇ ಮೆರೆದರು. ದೇವಿ, ಜಗದಂಬೆ ಎಂಬ ಭಾವನೆಗಳು ಅವರನ್ನು ತಾಯಿಯೆಂದು ಪ್ರೀತಿಸಲು ಅಡಚಣೆಗಳೇ ಎಂದು ತಿಳಿದಿದ್ದ ಅವರು 'ತಾಯಿ' ಎಂದು ಕರೆಸಿಕೊಳ್ಳಲು ಬಯಸುತ್ತಿದ್ದರು. ದಿವ್ಯತೆಯ ಬಗ್ಗೆ ಮುಖಸ್ತುತಿ ಮಾಡಿ ಹೆಚ್ಚು ಮಾತಾಡುವುದು ಅವರಿಗೆ ಅಷ್ಟೊಂದು ಇಷ್ಟವಾಗುತ್ತಿರಲಿಲ್ಲ. ಆದರೆ ಶ್ರದ್ಧೆಯುಳ್ಳವರಿಗೆ ತಮ್ಮ ನಿಜಸ್ವರೂಪದ ಪ್ರಕಾಶವನ್ನು ತೋರಿಸಿದ್ದೂ ಉಂಟು. ಭಕ್ತರು ತಮ್ಮನ್ನು ದೇವಿಯೆಂದು ಪೂಜಿಸಿ, ಗೌರವಿಸಬೇಕು ಎಂದು ಬಯಸಿದವರಲ್ಲ. ಅವರ ಶ್ರದ್ಧೆಗೆ ಪುಷ್ಟಿನೀಡಲು ಸಾಧನೆಯಲ್ಲಿ ತಮ್ಮನ್ನು ಆಶ್ರಯಿಸಲು ಪ್ರೇರಣೆ ನೀಡುವ ಉದ್ದೇಶದಿಂದ ಬಹಳ ಅಪರೂಪವಾಗಿ ದಿವ್ಯತೆಯ ಬಗ್ಗೆ ಅಸಾಧ್ಯ. ಅವಳ ಕೃಪೆಯಿಲ್ಲದೆ ಅವಳನ್ನು ತಿಳಿವುದೆಂತು? ಈ ಭಾವನೆಯನ್ನು ಕುವೆಂಪು ಅವರು ಮನೋಜ್ಞವಾಗಿ ವ್ಯಕ್ತಪಡಿಸುತ್ತಾರೆ : "ಶ್ರೀಮಾತೆ ಸಾಮಾನ್ಯೆಯಂತೆ ತೋರಿದರೂ ಅತ್ಯಂತ ಅಸಾಧಾರಣೆಯಾಗಿರುವುದರಿಂದಲೇ ಬರಿಯ ವಿಚಾರ ಮಾತ್ರ ಸುಲಭರಲ್ಲ. ಯಾರನ್ನು ಶ್ರೀರಾಮಕೃಷ್ಣ ಪರಮಹಂಸರು ಜಗಜ್ಜನನಿಗಾಗಿ ಸಮೆದ ದೇವೀಪೀಠದ ಮೇಲೆ ಕುಳ್ಳಿರಿಸಿ, ಪೂಜಿಸಿ, ತಮ್ಮ ತಪಃಫಲವೆಲ್ಲವನ್ನೂ ಸಮರ್ಪಿಸಿ, ಸರ್ವಮಂಗಲಮಾಂಗಲ್ಯೇ ಎಂದು ಸ್ತೋತ್ರಗೈದು ಸಾಷ್ಟಾಂಗ ವೆರಗಿದರೋ .... ಆ ಮಹಾಮಾತೆಯ ನಿಜ ಸ್ವರೂಪವನ್ನು ಯಾರು ತಾನೆ ಅರಿಯಬಲ್ಲರು, ಆಕೆಯೇ ಆ ಪ್ರತ್ಯಕ್ಷಾನುಭೂತಿಯನ್ನು ದಯಪಾಲಿಸದಿದ್ದರೆ? "(ಅದೇ, ಪು. ೧೫೫).

ಶ್ರೀಮಾತೆಯ ದಿವ್ಯತೆಯನ್ನರಿತು ಸಮರ್ಪಣಾ ಭಾವವನ್ನು ತಾಳುವ ಕವಿ ಜಗಜ್ಜನನಿಯ ಸ್ತುತಿಯನ್ನು ಮಾಡುವ ಅನೇಕ ಕಾವ್ಯಗಳನ್ನು ರಚಿಸಿದ್ದಾರೆ. "ಸೂತ್ರಧಾರಿಣಿ ನೀನು, ಪಾತ್ರಚಾರಿಯು ನಾನು...." ಅವರ ಈ ಭಾವಕ್ಕೆ ನಿದರ್ಶನ. ವಿಸ್ತೃತವಲ್ಲದಿದ್ದರೂ ಸಮಗ್ರವಾಗಿ ಶ್ರೀಮಾತೆಯ ಜೀವನದ ವಿಶ್ಲೇಷಣೆಯನ್ನು ಮಾಡಿರುವ ಕುವೆಂಪು ಅವರಿಗೆ ಅವರನ್ನು ನೆನೆವುದೇ ತಪಸ್ಸು, ಗುರುತಪಶ್ಶಕ್ತಿಯ ಅನುಭೂತಿ. ದಿವ್ಯತ್ರಯರಲ್ಲಿ ಅಸಾಧಾರಣ ಶ್ರದ್ಧೆಯನ್ನು ಮೆರೆದ ಕುವೆಂಪು ಧನ್ಯರು, ಕೃತಕೃತ್ಯರು. ✡

ಶ್ರೀಮಾತೆಯ ಬದುಕು ದೂರದ ವೀಣಾಧ್ವನಿಯಂತೆ ಸುಮಧುರ, ಸುಪ್ರಶಾಂತ. ಕಿವಿಗೊಟ್ಟು ಆಲಿಸಿದಲ್ಲದೆ ಕೇಳುವುದೂ ಅಸಂಭವ; ಮನಮುಟ್ಟಿ ಕೇಳಿದಲ್ಲದೆ ಅದರ ಇಂಪು ಅನುಭವಕ್ಕೆ ಬರುವುದಿಲ್ಲ. ಹೆದ್ದಾರಿಗೆ ದೂರದಲ್ಲಿರುವ ಎಲೆಮರೆಯ ಹೂವಿನ ನರುಗಂಪಿನಂತೆ ಅವಸರದ ಪಯಣಿಗರಿಗೆ ಅದು ಅವೇದ್ಯ. ಅದು ದೈನಂದಿನ ಸಾಂಸಾರಿಕ ಜೀವನದ ಸಕಲ ಲಕ್ಷಣಗಳಿಂದ ಸಮನ್ವಿತವಾಗಿದೆ; ವೈಭವಪೂರ್ಣವಾದರೂ ವಿನಯ ದೀನ; ಸಾಹಸಪೂರ್ಣವಾದುದಾದರೂ ನೀರಸ ಸಾಮಾನ್ಯ; ಶ್ರದ್ಧಾ ಮಹಿಮೆಯಿಂದ ಧೀಮದರ ಕೌಟುಂಬಿಕ ಕಷ್ಟಕ್ಲೇಶಗಳಿಂದ ದುಃಖಪೂರ್ಣ ; ಶತಶತ ಅಪಮಾನ ಅನ್ಯಾಯಗಳಿಂದ ತಾಡಿತವಾದರೂ ಸರ್ವದಾ ಕ್ಷಮಾಶೀಲ; ಆದಿಶಕ್ತಿಯ ಸರ್ವಶಕ್ತಿಕತ್ತವಾದ ಬೆಂಬಲವಿದ್ದರೂ ಅಬಲದಂತೆ ವ್ಯವಹರಿಸುವ ಸಹಿಷ್ಣು. ಅಂತಹ ಬದುಕನ್ನು ಕುರಿತು ಉಪನ್ಯಾಸ ಮಾಡುವುದಿರಲಿ ಗಟ್ಟಿಯಾಗಿ ಮಾತನಾಡಿದರೂ ಅದಕ್ಕೆ ಅಪಚಾರ ಮಾಡಿದಂತಾಗುತ್ತದೆ. ಇನ್ನು ಜೀವನ ಚರಿತ್ರೆಯನ್ನು ಬರೆಯುವುದೆಂದರೆ..... — ಕುವೆಂಪು ✡

ಪ್ರಾಯೋಜಕರು: ಎಪಿಯೆಸ್ ಜ್ಯೂವೆಲರ್ಸ್, ಡಾ.ರಾಜಕುಮಾರ್ ರೋಡ್,
ಸದರ್ನ್ ಎಕ್ಸಟೆಂಷನ್ ಕೊಳ್ಳೇಗಾಲ –571 440